ಚುಟುಕು ಸುದ್ದಿ

ನಾಯಕ ಸಮುದಾಯಕ್ಕೆ ಎಂಪಿ ಟಿಕೇಟ್ ನೀಡಲು ಒತ್ತಾಯ

ಉದಯಕಾಲ ನ್ಯೂಸ್

ಮೈಸೂರು: ಲೋಕಸಭಾ ಚುನಾವಣೆಯಲ್ಲಿ ಮೈಸೂರು-ಕೊಡಗು ಕ್ಷೇತ್ರದಿಂದ ಸ್ಪರ್ಧಿಸಲು ನಾಯಕ ಸಮುದಾಯಕ್ಕೆ ಕಾಂಗ್ರೆಸ್ ಪಕ್ಷ ಟಿಕೆಟ್ ನೀಡಬೇಕು ಎಂದು ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ಅಧ್ಯಕ್ಷ ದ್ಯಾವಪ್ಪ ನಾಯಕ ಒತ್ತಾಯಿಸಿದರು. ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ಷೇತ್ರದಲ್ಲಿ ಸಮುದಾಯದ 2 ಲಕ್ಷಕ್ಕೂ ಅಧಿಕ ಮತದಾರರಿದ್ದಾರೆ. ಆದರೂ ಜನಸಂಖ್ಯೆಗೆ ತಕ್ಕ ರಾಜಕೀಯ ಪ್ರಾತಿನಿಧ್ಯ ದೊರೆತಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ನಮಗೆ ಸಾಮಾಜಿಕ ನ್ಯಾಯ ದೊರಕಿಸಬೇಕು ಎಂದು ಒತ್ತಾಯಿಸಿದರು. ಮೈಸೂರು ವಿಭಾಗದಲ್ಲಿಯೂ 15 ಲಕ್ಷ ಮತದಾರರಿದ್ದೇವೆ. ಇಲ್ಲಿ ಟಿಕೆಟ್ ನೀಡಿದರೆ ಚಾಮರಾಜನಗರ ಮಂಡ್ಯ ಹಾಸನ ತುಮಕೂರು ಕ್ಷೇತ್ರದಲ್ಲಿ ಪಕ್ಷಕ್ಕೆ ಸಹಕಾರವಾಗಲಿದೆ. ಬಿಜೆಪಿಯವರು ಅವಕಾಶ ನೀಡಿದರೂ ಸಹಕರಿಸುತ್ತೇವೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಮುದಾಯದ ಮುಖಂಡರಾದ ಶಿವನಂಜಯ್ಯ ರಮ್ಮನಹಳ್ಳಿ, ವಾಲ್ಮೀಕಿ ನಿಂಗರಾಜ್, ಮಯೂರ ಕಲ್ಕುಣಿಕೆ, ಕೃಷ್ಣಸೋಮಶಪುರ, ಬನ್ನಿಕುಪ್ಪೆ ರಾಮಚಂದ್ರ, ಹುಣಸೂರು ರಾಜು ಭಾಗವಹಿಸಿದ್ದರು.

ಜ.16ಕ್ಕೆ ರಾಜ್ಯಮಟ್ಟದ ಸ್ಪರ್ಧಾಕೂಟ

ಉದಯಕಾಲ ನ್ಯೂಸ್

ಮೈಸೂರು: ಕ್ರೀಡಾ ಭಾರತಿ ಸಂಸ್ಥೆಯಿಂದ ಜ.12ರಂದು ಬೆಳಗ್ಗೆ 9 ಗಂಟೆಗೆ ಯಾದವಗಿರಿಯ ರಾಮಕೃಷ್ಣ ವಿದ್ಯಾಶಾಲೆಯಲ್ಲಿ ರಾಜ್ಯಮಟ್ಟದ ಸ್ಕೂಲ್ ಬ್ಯಾಂಡ್ ಸ್ಪರ್ಧಾಕೂಟ ಆಯೋಜಿಸಲಾಗಿದೆ ಎಂದು ಸಂಸ್ಥೆಯ ದಕ್ಷಿಣ ಭಾರತ ವಿಭಾಗದ ಕಾರ್ಯದರ್ಶಿ ಮಹೇಂದ್ರ ಪ್ರಸಾದ್ ತಿಳಿಸಿದರು. ಬುಧವಾರ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ವಿವಿಧ ಭಾಗಗಳಿಂದ ಜಿಲ್ಲಾ ಮಟ್ಟದಲ್ಲಿ ವಿಜೇತರಾದ 15 ತಂಡಗಳು ಸ್ಪರ್ಧೆಗೆ ಆಗಮಿಸಲಿವೆ. ವಿದ್ಯಾಶಾಲೆಯ ಕರೆಸ್ಪಾಂಡೆಂಟ್ ಯುಕ್ತೇಶಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಸಂಸ್ಥೆಯ ಕ್ಷೇತ್ರೀಯ ಸಂಯೋಜಕ ಎ.ಎನ್.ಅಶೋಕ್ ಉದ್ಘಾಟಿಸುವವರು ಎಂದು ತಿಳಿಸಿದರು. ಉತ್ತಮ ಹತ್ತು ತಂಡಗಳಿಗೆ ಒಟ್ಟು 55 ಸಾವಿರ ನಗದು ಬಹುಮಾನ ಲಭ್ಯವಿದ್ದು, ಪ್ರಥಮ ಸ್ಥಾನಕ್ಕೆ 10 ಸಾವಿರ ನೀಡಲಾಗುವುದು. ಟ್ರೋಫಿಗಳನ್ನು ನೀಡಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಜಿಲ್ಲಾಧ್ಯಕ್ಷ ಅಮೃತ ಪುರೋಹಿತ್, ಕಾರ್ಯದರ್ಶಿ ಪ್ರಶಾಂತ್, ಮಹಿಳಾ ಘಟಕದ ಕಾರ್ಯದರ್ಶಿ ಕಾವ್ಯ, ಸದಸ್ಯ ಆನಂದ್ ಉಪಸ್ಥಿತರಿದ್ದರು.

ಬಸವ ಸೇವಾ ಪ್ರಶಸ್ತಿ ಪ್ರದಾನ

ಮೈಸೂರು: ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆಗೊಳಿಸಿ, ಸಾಧಕರಿಗೆ ವಿವಿಧ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ವೇಳೆ ಸಾರ್ಥಕ ಶರಣ ದಂಪತಿ ಪ್ರಶಸ್ತಿಯನ್ನು ಡಾ.ಕೆ.ಲೀಲಾ ಪ್ರಕಾಶ್, ಕೇಶವ ಪ್ರಸಾದ್ ದಂಪತಿ ಸ್ವೀಕರಿಸಿದರು. ಸಮಾಜ ಸೇವೆಗಾಗಿ ಎಂ.ಪ್ರದೀಪ್‌ಕುಮಾರ್, ಎಂ.ಪೂರ್ಣಿಮಾ, ಪ್ರಜ್ವಲ್ ರಾಮಣ್ಣ, ಉದ್ಯಮ ಕ್ಷೇತ್ರಕ್ಕಾಗಿ ಎಸ್. ಎಂ.ಶಿವಪ್ರಕಾಶ್, ಸಾರ್ವಜನಿಕ ಸೇವೆಗಾಗಿ ಜಿ. ಗೋಪಾಲ್ ಹಾಗೂ ಉದ್ಯಮ ಮತ್ತು ಸಮಾಜ ಸೇವೆಗಾಗಿ ಷಡಕ್ಷರಿ ಅವರಿಗೆ ಬಸವ ಸೇವಾ ಪ್ರಶಸ್ತಿ ಪ್ರದಾನ ಮಾಡಲಾಯಿತು.

'ಯೋಗ ದೈಹಿಕ, ಮಾನಸಿಕ ಸಾಮರ್ಥ್ಯ ವೃದ್ಧಿಯ ಸಾಧನ'

ರಾಷ್ಟ್ರೀಯ ಆಯುಷ್ ಅಭಿಯಾನದಡಿ ಎರಡು ದಿನಗಳ ಯೋಗ ತರಬೇತಿ ಶಿಬಿರ

ಉದಯಕಾಲ ನ್ಯೂಸ್

ಚನ್ನರಾಯಪಟ್ಟಣ: ಈಗಿನ ಒತ್ತಡದ ಜೀವನಶೈಲಿಯಲ್ಲಿ ಮನಸ್ಸು ಮತ್ತು ದೇಹವನ್ನು ಸುಸ್ಥಿತಿಯಲ್ಲಿಡಲು ಪ್ರತಿಯೊಬ್ಬರಿಗೂ ಯೋಗಾಭ್ಯಾಸ ಅನಿವಾರ್ಯ ಜೀವನ ಕ್ರಮವಾಗಿದೆ ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಅಭಿಪ್ರಾಯಪಟ್ಟರು. ಪಟ್ಟಣದ ನಂದ ಕನ್ವೆನ್ಷನ್ ಹಾಲ್ ನಲ್ಲಿ ಮಂಗಳವಾರದಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆಯುಷ್ ಇಲಾಖೆ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ಆಯುಷ್ ಅಭಿಯಾನದಡಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಆಯೋಜಿಸಲಾಗಿದ್ದ ಎರಡು ದಿನಗಳ ಯೋಗ

ತರಬೇತಿ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು ಪ್ರಸ್ತುತ ಜೀವನವು ಒತ್ತಡದಿಂದ ಕೂಡಿದೆ. ಇದರ ಫಲವಾಗಿ ಮಧುಮೇಹ, ಅಧಿಕ ರಕ್ತದೊತ್ತಡ, ಹೃದ್ರೋಗದಂತಹ ಅನೇಕ ಅನಾರೋಗ್ಯಗಳನ್ನು ಅನುಭವಿಸುವಂತಾಗಿದೆ. ಇದಕ್ಕೆ ಪರಿಹಾರವೆಂದರೆ ದಿನದಲ್ಲಿ ಸ್ವಲ್ಪ ಸಮಯವಾದರೂ ಯೋಗಾಭ್ಯಾಸಕ್ಕೆ ಮೀಸಲಿಡಬೇಕು ಎಂದರು.

ಕೇವಲ ದೈಹಿಕವಾಗಿ ಸದೃಢವಾಗಿದ್ದರೆ ಒಳ್ಳೆಯ ಆರೋಗ್ಯವಲ್ಲ. ಮನುಷ್ಯ ಮಾನಸಿಕವಾಗಿಯೂ ಮನೋಲ್ಲಾಸದಿಂದ ಇದ್ದಾಗ ಮಾತ್ರ ಮನುಷ್ಯ ಅತ್ಯುತ್ತಮ ಆರೋಗ್ಯ ಸ್ಥಿತಿ ಹೊಂದಿರಲು ಸಾಧ್ಯವಾಗಲಿದೆ. ಯೋಗವನ್ನು ಪ್ರತಿಯೊಬ್ಬರೂ ನಿತ್ಯ ಜೀವನದಲ್ಲಿ ಅಳವಡಿಸಿಕೊಂಡರೆ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯ ವೃದ್ಧಿಯಾಗಲಿದೆ. ಯೋಗಾಭ್ಯಾಸದಿಂದ ದೇಹದಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಲಿದೆ. ಯೋಗಾಭ್ಯಾಸವನ್ನು ಜೀವನದಲ್ಲಿ ಅಳವಡಿಸಿಕೊಂಡಲ್ಲಿ ಆರೋಗ್ಯದ ಬಗ್ಗೆ ನಿರ್ಭೀತಿಯಿಂದ ಜೀವನ ನಡೆಸಲು ಈ ಯೋಗವು ಸಹಕಾರಿಯಾಗಲಿದೆ. ಹೀಗಾಗಿ ಆರೋಗ್ಯ ಪೂರ್ಣ ಬದುಕಿಗೆ ಯೋಗ ಅತ್ಯುತ್ತಮ ಸಾಧನವಾಗಲಿದೆ. ಹೀಗಾಗಿ ಪ್ರತಿಯೊಬ್ಬರೂ ಯೋಗಾಭ್ಯಾಸದಲ್ಲಿ ತೊಡಗಿಸಿಕೊಂಡು ಸದೃಢರಾಗಬೇಕೆಂದು ಕರೆ ನೀಡಿದರು.ಯೋಗ ಶಿಬಿರದಲ್ಲಿ ಜಿಲ್ಲಾ ಆಯುಷ್ ಅಧಿಕಾರಿ ಡಾ. ವೀಣಾಲತಾ ಮಾತನಾಡಿದರು, ಕಾರ್ಯಕ್ರಮದ ಸಂಯೋಜಕ ಡಾ. ಪವನ್ ಕುಮಾರ್ ತಾಲೂಕು ದೈಹಿಕ ಶಿಕ್ಷಣ ಪರೀಕ್ಷಕ ಮಹದೇವ್ ಡಾ.ರವೀಂದ್ರ, ಯೋಗ ಗುರುಗಳು ಹಾಗೂ ಶಿಬಿರಾರ್ಥಿಗಳು ಭಾಗವಹಿಸಿದ್ದರು.

ರಾಷ್ಟ್ರಮಟ್ಟದ ನೃತ್ಯ ಸ್ಪರ್ಧೆಗೆ ಗ್ರೀನ್ ಕಿಡ್ಸ್ ಶಾಲೆ ಆಯ್ಕೆ

ಉದಯಕಾಲ ನ್ಯೂಸ್

ಪಿರಿಯಾಪಟ್ಟಣ: ನೃತ್ಯ ಸ್ಪರ್ಧೆಯಲ್ಲಿ ಸತತ ಐದನೇ ಬಾರಿಗೆ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾದ ಪಿರಿಯಾಪಟ್ಟಣದ ಗ್ರೀನ್ ಕಿಡ್ಸ್ ಡಾನ್ಸ್ ಶಾಲೆ. ಮಂಡ್ಯದಲ್ಲಿ ಆಯೋಜಿಸಲಾಗಿದ್ದ ರಾಜ್ಯಮಟ್ಟದ ಕರ್ನಾಟಕ ಸ್ಪೋರ್ಟ್ಸ್ ಡ್ಯಾನ್ಸ್ ಅಸೋಸಿಯೇಷನ್ ನೃತ್ಯ ಸ್ಪರ್ಧೆಯಲ್ಲಿ ಪಿರಿಯಾಪಟ್ಟಣದ ಗ್ರೀನ್ ಕಿಡ್ಸ್ ಡಾನ್ಸ್ ಸ್ಕೂಲ್ ವಿದ್ಯಾರ್ಥಿಗಳು ಎರಡು ಚಿನ್ನದ ಪದಕ ಎರಡು ಬೆಳ್ಳಿಯ ಪದಕ ಹಾಗೂ 3 ಕಂಚಿನ ಪದಕಗಳನ್ನು ಪಡೆಯುವ ಮೂಲಕ ಫೋಕ್ ಡ್ಯಾನ್ಸ್ ವಿಭಾಗದಲ್ಲಿ ದ್ವಿತೀಯ ಸ್ಥಾನ ಪಡೆದು ಫೆಬ್ರವರಿ ತಿಂಗಳ 5,6,7 ರಂದು ನಡೆಯಲಿರುವ ಕರ್ನಾಟಕ ಸ್ಪೋರ್ಟ್ಸ್ ಡಾನ್ಸ್ ಅಸೋಸಿಯೇಷನ್ ವತಿಯಿಂದ ನಡೆಯಲಿರುವ ರಾಷ್ಟ್ರಮಟ್ಟದ ನೃತ್ಯ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ ಎಂದು ಗ್ರೀನ್ ಕಿಡ್ಸ್ ನೃತ್ಯ ಶಾಲೆಯ ಸಂಸ್ಥಾಪಕರಾದ ಅಂಬಾರಿ ಪರಮೇಶ್ ಹರ್ಷ ವ್ಯಕ್ತಪಡಿಸಿದರು. ಈ ಹಿಂದೆ ಗೋವಾ, ಆಂದ್ರಪ್ರದೇಶ, ಮಹಾರಾಷ್ಟ್ರ ಮತ್ತು ವಿಶಾಖಪಟ್ಟಣದಲ್ಲಿ ನಡೆದ ರಾಷ್ಟ್ರಮಟ್ಟದ ನೃತ್ಯ

ಸ್ಪರ್ಧೆಯಲ್ಲಿ ಭಾಗವಹಿಸಿ ವಿಜೇತರಾಗಿದ್ದರು. ಗ್ರೀನ್ ಕಿಡ್ಸ್ ಸಂಸ್ಥೆಯ ಗೌರವಾಧ್ಯಕ್ಷ ಎನ್. ಎಲ್ ಗಿರೀಶ್ ಮಾತನಾಡಿ ಗ್ರಾಮೀಣ ಭಾಗದಲ್ಲಿರುವ ಮಕ್ಕಳು ಅವಕಾಷ ವಂಚಿತರಾಗದಂತೆ ಅವರ ನೃತ್ಯ ಪ್ರತಿಭೆಯನ್ನು ಬೆಳಕಿಗೆ ತಂದು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಲು ಪ್ರೋತ್ಸಾಹಿಸುವುದು ನಮ್ಮ ಸಂಸ್ಥೆಯ ಉದ್ದೇಶ ಎಂದು ತಿಳಿಸಿದರು. ನೃತ್ಯ ಸ್ಪರ್ಧೆಯ ತೀರ್ಪುಗಾರರಾಗಿ ಹೇಮಾವತಿ, ರಕ್ಷಾ ಚಂದ್ರು, ರಾಕೇಶ್, ಮಹೇಶ್, ಅಜಯ್ ನಿರ್ವಹಿಸಿದ್ದರು. ಸ್ಪರ್ಧೆಯಲ್ಲಿ ಸ್ಪೋರ್ಟ್ಸ್ ಡಾನ್ಸ್ ಅಸೋಸಿಯೇಷನ್ ಸಿ ಇ ಒ ರವಿ ಸಿ, ಟೆಕ್ನಿಕಲ್ ಚೇರ್ಮನ್ ವಿನೋದ್ ಕರ್ಕರಾ, ಮಂಡ್ಯ ಭಾಗದ ಸರ್ಕಲ್ ಇನ್ಸ್‌ಪೆಕ್ಟರ್ ವಿನೋದ್, ವಿವಿಧ ನೃತ್ಯಶಾಲೆಗಳಿಂದ ಆಗಮಿಸಿದ್ದ ಸ್ಪರ್ಧಿಗಳು, ನೃತ್ಯ ಸಂಯೋಜಕರು ಮತ್ತು ಪೋಷಕರು ಇದ್ದರು.

ಕಟ್ಟೆಮಳಲವಾಡಿ: ಹುಣಸೂರು ತಾಲ್ಲೂಕಿನ ಗಾವಡಗೆರೆ ಹೋಬಳಿ ಕೇಂದ್ರದಲ್ಲಿ ಉಪತಹಶೀಲ್ದಾರ್ ಆಗಿ ವೆಂಕಟೇಶ್ ಹಾಗೂ ರಾಜಸ್ವ ನಿರೀಕ್ಷಕರಾಗಿ ಭಾಸ್ಕರ್ ರವರು ಸೇವೆ ಸಲ್ಲಿಸಿ ಬೇರೆ ಕಡೆಗೆ ವರ್ಗಾವಣೆಗೊಂಡ ಹಿನ್ನೆಲೆಯಲ್ಲಿ ಗಾವಡಗೆರೆಯ ಉಪತಾಹಶೀಲ್ದಾರ್ ಅರುಣ್ ಕುಮಾರ್ ರವರು ಬುಧವಾರ ತಮ್ಮ ಕಚೇರಿಯಲ್ಲಿ ಬೀಳ್ಕೊಡುಗೆ ಕೊಟ್ಟು ಸನ್ಮಾನಿಸಿದರು. ಈ ಸಂದರ್ಭದಲ್ಲಿ ರಾಜಸ್ವ ನಿರೀಕ್ಷಕ ಹೇಮಂತ್, ಗ್ರಾಮ ಲೆಕ್ಕಾಧಿಕಾರಿಗಳಾದ ಶ್ರೀ ವರ್ಷ ಸೇರಿದಂತೆ ಗಾವಡಗೆರೆ ವ್ಯಾಪ್ತಿಯ ಎಲ್ಲಾ ಗ್ರಾಮ ಲೆಕ್ಕಾಧಿಕಾರಿಗಳು ಹಾಗೂ ಸಹಾಯಕರು ಇದ್ದರು.

'ಭಾರತದ ಕಲೆ, ಸಂಸ್ಕೃತಿಗೆ ಜಗತ್ತಿನಾದ್ಯಂತ ಮಹತ್ವ ಸ್ಥಾನವಿದೆ'

ಉದಯಕಾಲ ನ್ಯೂಸ್

ಚನ್ನರಾಯಪಟ್ಟಣ: ಭಾರತದ ಕಲೆ ಮತ್ತು ಸಂಸ್ಕೃತಿಗೆ ಜಗತ್ತಿನಾದ್ಯಂತ ಅತ್ಯಂತ ಮಹತ್ವದ ಸ್ಥಾನವಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ತಿಳಿಸಿದರು. ನವೋದಯ ವಿದ್ಯಾಸಂಸ್ಥೆಯ ಸಭಾಂಗಣದಲ್ಲಿ ನವೋದಯ ಪದವಿಪೂರ್ವ ಕಾಲೇಜಿನ 2023-24 ನೇ ಸಾಲಿನ ಸಾಂಸ್ಕೃತಿಕ ಸಂಘದ ವಾರ್ಷಿಕೋತ್ಸವ ಹಾಗೂ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಭಾರತ ವೈವಿಧ್ಯತೆಯಲ್ಲಿ ಏಕತೆಯನ್ನು ಸಾಧಿಸಿರುವ ರಾಷ್ಟ್ರ. ಭಾರತದ ಸಂಸ್ಕೃತಿ, ಸಂಪ್ರದಾಯ ಎಲ್ಲವೂ ವಿಭಿನ್ನ ಮತ್ತು ವಿಶಿಷ್ಟ. ಹಲವು ಕಲೆಗಳ ಬೀಡು ಭಾರತ. ಶತಮಾನಗಳಿಂದ ಬೆಳೆದು ಬಂದಿರುವ ನಮ್ಮ ಶಾಸ್ತ್ರೀಯ ನೃತ್ಯ, ಸಂಗೀತ ಪ್ರಾಕಾರಗಳನ್ನು ಹಾಗೂ ನಮ್ಮ ಭಾರತೀಯ ಸಂಸ್ಕೃತಿಯನ್ನು ಇಡೀ ವಿಶ್ವವೇ ಮೆಚ್ಚಿಕೊಂಡು ಗೌರವಿಸಿ, ಅನುಸರಿಸುತ್ತಾರೆ. ನಾವುಗಳು ನಮ್ಮ ಕಲೆ ಮತ್ತು ಸಂಸ್ಕೃತಿಯನ್ನು ಆರಾಧಿಸುವುದರ ಜೊತೆಗೆ ಉಳಿಸಿಕೊಂಡು ಹೋಗುವುದು ಸಹ ನಮ್ಮ ಆದ್ಯ ಕರ್ತವ್ಯ. ಸಾಂಸ್ಕೃತಿಕ ಕಲೆಗಳು ವಿದ್ಯಾರ್ಥಿಗಳಲ್ಲಿ ಕ್ರಿಯಾಶೀಲತೆಯನ್ನು ಬೆಳೆಸುತ್ತವೆ. ಮಕ್ಕಳಲ್ಲಿ ಸಂವಹನ ಕಲೆ ವೃದ್ಧಿಯಾಗುವುದರ ಜೊತೆಗೆ ವಿಶ್ವಾಸ ಬೆಳೆಸುತ್ತವೆ. ಪ್ರತಿಯೊಬ್ಬ ವಿದ್ಯಾರ್ಥಿಗಳಲ್ಲಿ ಸಹ ಪ್ರತಿಭೆಯಿದ್ದು ಅದನ್ನು ಪೋಷಿಸುವ ನಿಟ್ಟಿನಲ್ಲಿ ವಿದ್ಯಾಸಂಸ್ಥೆ ಕಾರ್ಯ ನಿರ್ವಹಿಸುತ್ತದೆ ಎಂದು ಶ್ಲಾಘಿಸಿದರು. ಎಂಟು ದಶಗಳ ಇತಿಹಾಸವಿರುವ ನವೋದಯ ವಿದ್ಯಾಸಂಸ್ಥೆ, ಜಿಲ್ಲೆಯಲ್ಲಿ ಗುಣಮಟ್ಟದ ಶಿಕ್ಷಣ

ನೀಡುವಲ್ಲಿ ಮೊದಲನೆ ಸಾಲಿನಲ್ಲಿದೆ. ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ನೀಡುವಷ್ಟೇ ಆದ್ಯತೆಯನ್ನು ನವೋದಯ ಶಾಲೆಗೆ ನೀಡುತ್ತಿದೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಶಾಲಾ ಅಭಿವೃದ್ಧಿಗೆ 2.5 ಲಕ್ಷ ಅನುದಾನವನ್ನು ನೀಡಿದ್ದು ಮುಂದಿನ ಆರ್ಥಿಕ ವರ್ಷದಲ್ಲಿ 20 ಲಕ್ಷ ರೂ ಅನುದಾನ ನೀಡುವುದಾಗಿ ತಿಳಿಸಿದರು. ಕಾರ್ಯಕ್ರಮದಲ್ಲಿ ನವೋದಯ ವಿದ್ಯಾ ಸಂಘದ ಅಧ್ಯಕ್ಷ ಟಿ.ಸಿ.ಬಸವರಾಜು ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಬಿ.ಎಸ್.ಭೋಜ್ ರಾಜ್ ಬಹುಮಾನ ವಿತರಣೆ ಮಾಡಿದರು. ಗೌರವಾಧ್ಯಕ್ಷ ಸಿ.ಎಸ್.ಸುರೇಶ್, ಉಪಾಧ್ಯಕ್ಷ ಜಿ.ಎಂ.ಕಿರಣ್, ಸಹ ಕಾರ್ಯದರ್ಶಿ ಸಿ.ಜಿ.ವೇಣುಗೋಪಾಲ್, ಖಜಾಂಚಿ ನಂಜುಂಡಮೈಮ್, ನಿರ್ದೇಶಕರಗಳಾದ ಸಿ.ಎಸ್. ಆದಿಶೇಶ್ ಕುಮಾರ್, ಹೆಚ್. ಎನ್.ನವೀನ್, ವಿ.ಜಿ. ಅಶೋಕ್, ಜಿ.ಶಂಕರೇಗೌಡ, ಮುಖ್ಯೋಪಾಧ್ಯಾಯ ಸೀತಾರಾಮ್ ನಾಯಕ್, ಮುಖ್ಯ ಶಿಕ್ಷಕರಾದ ಎನ್, ಮಂಜುನಾಥ್, ಸತ್ಯವತಿ, ಶಿಕ್ಷಕ ವೃಂದ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

JM FINANCIAL

ಜೆಎಂ ಫೈನಾನ್ಸಿಯಲ್ ಅಸೆಟ್ ರಿಕನ್‌ಸ್ಟ್ರಕ್ಷನ್ ಕಂಪನಿ ಲಿಮಿಟೆಡ್
ಕಾರ್ಪೊರೇಟ್ ಗುರುತಿನ ಸಂಖ್ಯೆ U67190MH2007PLC74287
ನೋ. ಕಚೇರಿ: 7ನೇ ಮಹಡಿ, ಸಿನರ್ಜಿ, ಅಪ್ಪಾಸಾಹೇಬ್ ಮರಾಠೆ ಮಾರ್ಗ ಪ್ರಭಾದೇವಿ, ಮುಂಬೈ-400025.
ಸಂಪರ್ಕ ವ್ಯಕ್ತಿ: 1. ಮಲ್ಲಿಕಾರ್ಜುನ್ ಬಿ ಹಾದಗಲಿ-9620686817. 2. ವಿಶಾಲ್ ಕೆಟಲೆ-9584966653. 3. ಅಕ್ಷಯ್ ಹಸ್ಲೀಜ-022-6224-1676

ಸಾಂಕೇತಿಕ ಸ್ವಾಧೀನತೆಯ ಮೇಲೆ ಇ-ಹರಾಜು ಮಾರಾಟ ಸೂಚನೆ, ಇ-ಹರಾಜು ದಿನಾಂಕ: 13.02.2024, ಬೆಳಗ್ಗೆ 11.00 ರಿಂಧ ಮಧ್ಯಾಹ್ನ 2.00 ಗಂಟೆ

ಸಾಲದ ಕೋಡ್/ಶಾಖೆ/ಸಾಲಗಾರ(ರು)/ಸಹ-ಸಾಲಗಾರ(ರು/ಅಡಮಾನದಾರ(ರು)	ತಗಾದೆ ಸೂಚನೆ ದಿನಾಂಕ ಮತ್ತು ಮೊತ್ತ	ಆಸ್ತಿ ವಿಳಾಸ-ಅಂತಿಮ	ಮೀಸಲು ಬೆಲೆ	ಅರ್ನೆಸ್ಟ್ ಠೇವಣಿ ಹಣ (ಇಎಂಡಿ) (ಆರ್‌ಪಿಯ 10%)	ಬಾಕಿ ಮೊತ್ತ (22.11.2023)
ಸಾಲದ ಕೋಡ್ ಸಂ. 15400001212, ಕೋಲಾರ (ಶಾಖೆ), ಮಂಜುನಾಥ್ ಇ (ಸಾಲಗಾರ), ಡಬ್ಲ್ಯು ಪೈಲೆಟ್ ಮೇರಿ ವಿಲ್ಮ (ಸಹ-ಸಾಲಗಾರ-1)	ದಿನಾಂಕ: 20.07.2021 ರೂ.26,45,228/- (ಇಪ್ಪತ್ತಾರು ಲಕ್ಷ ನಲವತ್ತೈದು ಸಾವಿರದ ಇನ್ನೂರ ಇಪ್ಪತ್ತೆಂಟು ರೂ.ಗಳು ಮಾತ್ರ)	ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ ಆಸ್ತಿಯ ವಿಸ್ತೀರ್ಣ : 401, ಸೈಟ್ ನಂ. ಎ-18, ಸರ್ ಎಂ ವಿ ನಗರ, ಬಿಇಎಂಎಲ್ ನಗರ, ಆಂಜೆ ಕೆಬಿಎಫ್, ಬಿಇಎಂಎಲ್ ನಗರ ಅಂಚೆ, ಲಿಟ್ಲ್ ಫ್ಲವರ್ ಶಾಲೆ ಹತ್ತಿರ, ಕೋಲಾರ, ಕರ್ನಾಟಕ - 563115.	ರೂ.20,00,000/- (ಇಪ್ಪತ್ತು ಲಕ್ಷ ರೂಪಾಯಿಗಳು ಮಾತ್ರ)	ರೂ.2,00,000/- (ಎರಡು ಲಕ್ಷ ರೂಪಾಯಿಗಳು ಮಾತ್ರ)	ರೂ.32,19,298/- (ಮೂವತ್ತೆರಡು ಲಕ್ಷ ಹತ್ತೊಂಭತ್ತು ಸಾವಿರದ ಇನ್ನೂರ ತೊಂಬತ್ತೆಂಟು ರೂಪಾಯಿಗಳು ಮಾತ್ರ)
ಸಾಲದ ಕೋಡ್ ಸಂ. 02900008035, ಮೈಸೂರು (ಶಾಖೆ), ರಾಜೇಶ ಎಸ್ (ಸಾಲಗಾರ), ಶಶಿಕಲ ಎಸ್ (ಸಹ-ಸಾಲಗಾರ-1)	ದಿನಾಂಕ: 16.06.2021 ರೂ.1,82,747/- (ಒಂದು ಲಕ್ಷ ಎಂಭತ್ತೆರಡು ಸಾವಿರದ ಏಳುನೂರ ನಲವತ್ತೇಳು ರೂ.ಗಳು ಮಾತ್ರ)	ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ ಆಸ್ತಿಯ ವಿಸ್ತೀರ್ಣ: ಸೈಟ್ ನಂ. 71/ಬಿ2, ಇಡಬ್ಲ್ಯುಎಸ್ ಎಸ್ ಎ ಕೆಹೆಚ್‌ಬಿ ಕಾಲೊನಿ, ಕೆ ಆರ್